


### ಗಮನ ಸೆಳೆದ ಲೇಖನ

ಜೂನ್ 28ರ ಮುಖಪುಟ ಲೇಖನ ಸುಧೀಂದ್ರ ಪ್ರಸಾದರ '4ಜಿ ಕ್ರಾಂತಿಯ ಹೊಸ್ತಿಲಲ್ಲಿ' ಲೇಖನ ಗಮನ ಸೆಳೆಯಿತು.

–ಪಿ.ಗೋವಿಂದರಾಜ್, ಶಿವಮೊಗ್ಗ/ ಗಾನಾ ಸುಮಾ, ಪುಟ್ಟಸೋಮನಹಳ್ಳಿ

### ಪೋಲಿಯೊ ಇಲ್ಲದಂತಾಗಲಿ

ಪೋಲಿಯೊ ರೋಗದ ಬಗ್ಗೆ ಡಾ. ಕೆ.ಕೆ. ಜಯಚಂದ್ರಗುಪ್ತ ಸವಿಸ್ತಾರವಾಗಿ ತಿಳಿಸಿದ್ದಾರೆ. ಆದಷ್ಟು ಬೇಗ ಈ ರೋಗವೂ– ಪ್ಲೇಗ್, ಮಲೇರಿಯಾ, ಸಿಡುಬುಗಳಂತೆ ಸಂಪೂರ್ಣ ನಾಶವಾಗಲಿ.

–ಪಿ.ಎನ್. ಶ್ರೀವತ್ಸ, ಬೆಂಗಳೂರು

### ಸಾಹಸಕ್ಕೆ ಎಣೆಯೇ?

'ಹಾರುವ ಕಾರುಗಳು' (ಕೆ.ಎನ್.ಸೋಮೇಶ್ವರ) ಮಾನವನ ಸಾಹಸಕ್ಕೆ ಎಣೆಯೇ ಇಲ್ಲ ಎಂಬ ಸಂದೇಶವನ್ನು ಸಾರಿತು.

–ಎಸ್. ನಿತ್ಯ, ಮೂಡಬಿದಿರೆ

### ಮಾನವೀಯ ಮೌಲ್ಯದ ಕಥೆ

ತಂಬ್ರಹಳ್ಳಿ, ರಾಮನಮಲಿಯವರ 'ಕೈ ಹಿಡಿದು ನಡೆಸೆನ್ನನು' ಕಥೆ ಚೆನ್ನಾಗಿದೆ. ಜಾತಿ, ಧರ್ಮಗಳನ್ನು ಮೆಟ್ಟಿನಿಂತು, ಮಾನವೀಯ ಮೌಲ್ಯಗಳನ್ನು ಬಿಂಬಿಸುವಲ್ಲಿ ಕಥೆಗಾರರು ಯಶಸ್ವಿಯಾಗಿದ್ದಾರೆ.

–ಸು. ವಿಜಯಲಕ್ಷ್ಮಿ, ಶಿವಮೊಗ್ಗ

### ಮರುವಾಯಿ ಸುಕ್ಕ ತುಳು ಶಬ್ದ

ಆಹಾರ ಪುಟದಲ್ಲಿ ಪ್ರಕಟವಾಗಿರುವ 'ಮರುವಾಯಿ ಸುಕ್ಕ ಸಾರು' ಬರಹಕ್ಕೆ ಇನ್ನಷ್ಟು ವಿವರಣೆ: ಮರುವಾಯಿ ಮತ್ತು ಸುಕ್ಕ ಎನ್ನುವುದು ತುಳು ಶಬ್ದ. ಇದಕ್ಕೆ ಕನ್ನಡದಲ್ಲಿ ಗುಳ್ಳೆ ಅಥವಾ ಕುಂದಾಪುರದಲ್ಲಿ  ಮೊಳಿ ಎಂತಲೂ ಸುಕ್ಕಕ್ಕೆ ಗಸಿ (ತುಂಬಾ ದಪ್ಪಗಿನ ಸಾಂಬಾರು ಮಿಶ್ರಣ) ಅಂತಲೂ ಹೇಳುತ್ತಾರೆ. ಅಕ್ಕಿಯಿಂದ ಮಾಡಿದ ಸಣ್ಣ ಸಣ್ಣ ಕಡುಬು ತುಂಡುಗಳನ್ನು ಗುಳ್ಳೆ ಅಥವಾ ಮರುವಾಯಿ ಪದಾರ್ಥ (ಸಾರು)ಕ್ಕೆ ಬೇಯಿಸುವಾಗ ಹಾಕಿದರೆ ಅದು ತಿನ್ನುವಾಗ ನಳಪಾಕವಾಗಿರುತ್ತದೆ.

–ಸುಮಿತ್ರಾ ಶಂಕರಪ್ಪ, ಹಳಿಯಾಳ

### ಹೃದಯ ಸ್ಪರ್ಶಿ ನೆನಪು

ಕಣ್ಮರೆಯಾದ ಇಬ್ಬರು ಮಹಾನ್ ವ್ಯಕ್ತಿಗಳ ಲೇಖನ ಹೃದಯ ಮುಟ್ಟುವಂತಿದ್ದವು: ಒಂದು ಏಣಗಿ ನಟರಾಜರ ನಟನಾ ಕೌಶಲ್ಯವನ್ನು ಚಿತ್ರಿಸಿದ್ದರೆ (ಗುಡಿಹಳ್ಳಿ ನಾಗರಾಜ) ಇನ್ನೊಂದು ಸಂಗೀತ ಕ್ಷೇತ್ರದಲ್ಲಿ ತನ್ನದೇ ಛಾಪು ಮೂಡಿಸಿದ ಗಜಲಿನ ಮಹಾರಾಜ ಮೆಹದಿ ಹಸನ್ (ದಿಲಾವರ್ ರಾಮದುರ್ಗ) ಎರಡು ಮಹಾನ್ ತಾರೆಗಳ ಬಗೆಗೆ ಚಿತ್ರಿಸಿದ 'ಸುಧಾ' ಸಂಗ್ರಹ ಯೋಗ್ಯ. ಏಣಗಿ ನಟರಾಜರ ನಟನೆಯ ಸಲುವಾಗಿಯೇ ನಾವು 'ಮಹಾನವಮಿ' ಧಾರಾವಾಹಿಯನ್ನು ತಪ್ಪದೇ ನೋಡುತ್ತಿದ್ದೆವು.

–ಮೇ.ಗೋ. ಸುಬ್ಬಣ್ಣ, ಮೇಗರವಳ್ಳಿ/ ತರಂಗಿಣಿ, ತುಮಕೂರು

### ಅಭಿನಯ ರೂಪಿಸಿದ ನಟ

ನೀನಾಸಂ ತಿರುಗಾಟಕ್ಕೆ ಅಭಿನಯ ಮಾದರಿ ರೂಪಿಸಿದ ಏಣಗಿ ನಟರಾಜ ಅದ್ಭುತ ನಟ. ಅವರ ಸಾವಿನ ಕುರಿತು ಲೇಖಕರ ಅಭಿಪ್ರಾಯ ಚಿಂತನಾರ್ಹವಾಗಿದೆ.

–ಡಿ.ಎಸ್. ಪಂಕಜ ಸುಬ್ರಮಣ್ಯಂ, ಬೆಂಗಳೂರು/ ನ.ಅ. ರಾವ್, ಬೆಂಗಳೂರು/ ಎಚ್. ಆನಂದ ಕುಮಾರ್, ಚಿತ್ರದುರ್ಗ/ ಪಿ.ಎಸ್. ನಾರಾಯಣ ಭಟ್ ಕೊಯಿಲ, ಪುತ್ತೂರು/ ರವೀಂದ್ರನಾಥ ಶಿ. ಯಡಹಳ್ಳಿ, ಬೀಳಗಿ/ ಶ್ರೀನಾಥ ಕೊನೇಟಿ, ಬೆಂಗಳೂರು/ ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ/ ಸರ್ವಜಿತ, ಹುಬ್ಬಳ್ಳಿ

### ಸರಿಯಾದ ಉತ್ತರ

'ನೀವು ಕೇಳಿದಿರಿ?' ವಿಭಾಗದಲ್ಲಿ ರಾಮ್‌ರವರು, 'ಸಪ್ತಪದಿ ಮದುವೆಗೂ ರಿಜಿಸ್ಟರ್ಡ್ ಮದ್ವೆಗೂ ಅಂತರವೇನು?' ಎಂಬ ಪ್ರಶ್ನೆಗೆ, 'ಒಂದು 'ಋಜು' ಮಾರ್ಗ, ಇನ್ನೊಂದು 'ರುಜು' ಮಾರ್ಗ!' ಎಂದು ನೀಡಿರುವ ಉತ್ತರ ಚುಟುಕಾದ, ಸೊಗಸಾದ, ಬುದ್ಧಿವಂತಿಕೆಯದ್ದು!

–ಕೆ. ಮೈಥಿಲಿ ಕೃಷ್ಣ, ಬೆಂಗಳೂರು

